ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 7–08–2018

## ಪತ್ರಿಕಾ ಆಮಂತ್ರಣ

1. **ಪತ್ರಿಕಾಗೋಷ್ಠಿ:**

ಎನ್ ಹೆಚ್. ಶಿವಶಂಕರ ರೆಡ್ಡಿ, ಕೃಷಿ ಸಚಿವರು.

ದಿನಾಂಕ: 08–08–2018, ಬುಧವಾರ ಸಮಯ: ಮಧ್ಯಾಹ್ನ 12.30 ಗಂಟೆಗೆ.
ಸ್ಥಳ: ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು

ಸಂಖ್ಯೆ: 785/895

## ಪತ್ರಿಕಾ ಪ್ರಕಟಣೆ

### ರಾಜ್ಯದಲ್ಲಿ ವಾಡಿಕೆಗಿಂತ ಶೇ. 3 ರಷ್ಟು ಮಳೆ ಕಡಿಮೆಯಾಗಿದೆ– ಸಚಿವ ಆರ್.ವಿ. ದೇಶಪಾಂಡೆ

ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ) :

ರಾಜ್ಯದಲ್ಲಿ ಮುಂಗಾರು ಒಂದನೇ ಜೂನ್‌ರಿಂದ ಆರನೇ ಆಗಸ್ಟ್ ಅವಧಿಗೆ 522 ಮಿ.ಮಿ. ವಾಡಿಕೆ ಮಳೆ ಇದ್ದು 2018 ರ ಈ ಅವಧಿಯಲ್ಲಿ 505 ಮಿ.ಮಿ. ಮಳೆಯಾಗಿದ್ದು ವಾಡಿಕೆ ಮಳೆಗೆ ಹೋಲಿಸಿದಾಗ ಶೇ. 3 ರಷ್ಟು ಕಡಿಮೆ ಮಳೆಯಾಗಿದೆ ಎಂದು ಕಂದಾಯ ಸಚಿವ ಆರ್.ವಿ. ದೇಶಪಾಂಡೆ ಅವರು ತಿಳಿಸಿದರು.

ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ರಾಜ್ಯದಲ್ಲಿ ಪ್ರಾಂತ್ಯವಾರು ಮಳೆ ಹಂಚಿಕೆಯನ್ನು ಗಮನಿಸಿದಾಗ ಮುಂಗಾರು 2018 ರ ಜುಲೈನಲ್ಲಿ ದಕ್ಷಿಣ ಒಳನಾಡಿನಲ್ಲಿ ಶೇ. 27 ರಷ್ಟು ಮಳೆ ಕೊರತೆ ಹಾಗೂ ಉತ್ತರ ಒಳನಾಡಿನಲ್ಲಿ ಶೇ. 44 ರಷ್ಟು ಮಳೆ ಕೊರತೆ ಕಂಡುಬಂದಿರುತ್ತದೆ ಹಾಗೂ ಜೂನ್ ಒಂದರಿಂದ ಆರನೇ ಆಗಸ್ಟ್ ಅಂತ್ಯಕ್ಕೆ ಉತ್ತರ ಒಳನಾಡಿನಲ್ಲಿ ಶೇ. 31 ರಷ್ಟು ಮಳೆ ಕೊರತೆಯಾಗಿದೆ ಎಂದರು.

ಮುಂಗಾರು  ಅವಧಿಗೆ ರಾಜ್ಯದ 90 ತಾಲ್ಲೂಕುಗಳಲ್ಲಿ ಸಾಧಾರಣ ಮಳೆ ಕೊರತೆ ಮತ್ತು 29 ತಾಲ್ಲೂಕುಗಳಲ್ಲಿ ತೀವ್ರ ಮಳೆ  ಕೊರತೆ  ಕಂಡು ಬಂದಿದ್ದು ಮುಂಗಾರು 2018 ನೇ ಹಂತಕ್ಕೆ 86 ತಾಲ್ಲೂಕುಗಳಲ್ಲಿ ಸಾಧಾರಣ ಮಳೆ ಕೊರತೆ ಕಂಡು ಬಂದಿರುತ್ತದೆ.

ಮಳೆ ಕೊರತೆ ಹಿನ್ನಲೆಯಲ್ಲಿ  ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಯಾವುದೇ ಕಾರಣಕ್ಕೂ ಮೇವಿನ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗಿದ್ದು ಈಗಾಗಲೇ ಮೇವಿನ ಸಂಗ್ರಹಣೆ ಮಾಡಲಾಗುತ್ತಿದೆ.

ಕೃಷಿ ಇಲಾಖೆಯು ಕಡಿಮೆ ನೀರು ಬೇಡುವ ಬೆಳೆ ಬೆಳೆಯಲು ಅಗತ್ಯವಾದ ಯೋಜನೆಯನ್ನು ಸಿದ್ದಪಡಿಸಿ ಜಾರಿಗೊಳಿಸಲಾಗುತ್ತದೆ.  ಇದರಿಂದಾಗಿ ಸಂಭವನೀಯ ಬೆಳೆ ನಷ್ಟವನ್ನು ಗಮನಾರ್ಹ ಪ್ರಮಾಣದಲ್ಲಿ ತಡೆಯಲು ಸಾಧ್ಯವಿದೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಜಲ ಸಂರಕ್ಷಣೆ ಕಾರ್ಯಗಳಿಗೆ ಆದ್ಯತೆ ನೀಡಿದ್ದು ಉದ್ಯೋಗ ಸೃಷ್ಟಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.  ಒಟ್ಟಾರೆಯಾಗಿ ರಾಜ್ಯದಲ್ಲಿ ಬರಗಾಲದಿಂದಾಗುವ ತೊಂದರೆಗಳನ್ನು ನಿಭಾಯಿಸಲು ವಿವಿಧ ಇಲಾಖೆಗಳು ಜಿಲ್ಲಾಧಿಕಾರಿಗಳ ನೇತೃತ್ವದ ತಂಡದೊಂದಿಗೆ ಪ್ರತಿವಾರ ವಿಡಿಯೋ ಕಾನ್ಪರೆನ್ಸ್ ನಡೆಸುವ ಮೂಲಕ ವಾಸ್ತವಿಕ ಚಿತ್ರಣವನ್ನು ಕಾಲಕಾಲಕ್ಕೆ ಚರ್ಚಿಸಲು ಸೂಚಿಸಲಾಗಿದೆ ಎಂದು ಹೇಳಿದರು.

**ಸಂಖ್ಯೆ: 786/896**

ಕನ್ನಡ ಸಾರಸತ್ವ ಲೋಕದ

## <u>ಡಾ ಸುಮತೀಂದ್ರ ನಾಡಿಗ್ ಅವರ ನಿಧನಕ್ಕೆ</u>
## <u>ಕನ್ನಡ ಮತ್ತು ಸಂಸ್ಕೃತಿ ಸಚಿವೆ ಡಾ ಜಯಮಾಲ ಸಂತಾಪ</u>

<u>ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)</u> :

ಕನ್ನಡ ಸಾರಸತ್ವ ಲೋಕದ ಹಿರಿಯ ಬರಹಗಾರ ಹಾಗೂ ನ್ಯಾಷನಲ್ ಬುಕ್ ಟ್ರಷ್ಟ್‌ನ ಮಾಜಿ ಅಧ್ಯಕ್ಷ ಡಾ ಸುಮತೀಂದ್ರ ನಾಡಿಗ್ ಅವರ ನಿಧನಕ್ಕೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಡಾ ಜಯಮಾಲ ರಾಮಚಂದ್ರ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಆಂಗ್ಲ ಭಾಷೆಯಲ್ಲಿ ಎರಡು ಸ್ನಾತಕ ಪದವಿಗಳನ್ನು ಪಡೆದಿದ್ದರೂ ಕೂಡಾ ಕನ್ನಡ ಭಾಷೆಯಲ್ಲಿಯೇ ತಮ್ಮ ಸಾಹಿತ್ಯ ಕೃಷಿ ಮಾಡಿದ ಕೀರ್ತಿ ಡಾ ಸುಮತೀಂದ್ರ ನಾಡಿಗ್ ಅವರದ್ದು. ನವ್ಯ ಸಾಹಿತ್ಯದ ಪ್ರವರ್ತಕರಲ್ಲಿ ಒಬ್ಬರಾಗಿ ಕನ್ನಡ ಸಾಹಿತ್ಯಕ್ಕೆ ಆಧುನಿಕತೆಯ ಸ್ಪರ್ಶ ನೀಡಿದ ಡಾ ಸುಮತೀಂದ್ರ ನಾಡಿಗ್ ಅವರು ಕಾವ್ಯ ಲೋಕದಲ್ಲಿ ಮಾತ್ರವಲ್ಲದೆ ಸಣ್ಣ ಕತೆಗಳ ಲೋಕದಲ್ಲಿಯೂ ದೊಡ್ಡ ಸಾಧನೆಯನ್ನು ಮಾಡಿದ್ದಾರೆ ಎಂದು ಅವರು ಬಣ್ಣಿಸಿದ್ದಾರೆ.

ಡಾ ಸುಮತೀಂದ್ರ ನಾಡಿಗ್ ಅವರ ಆತ್ಮಕ್ಕೆ ಚಿರಶಾಂತಿ ಲಭಿಸಲಿ. ನಾಡಿಗ್ ಅವರ ಕುಟುಂಬ ಮತ್ತು ಅಭಿಮಾನಿ ವರ್ಗಕ್ಕೆ ಶ್ರೀಯುತರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಡಾ ಜಯಮಾಲ ರಾಮಚಂದ್ರ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 787/897**

# ಎಸಿಬಿ ದಾಳಿ

**<u>ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)</u> :**

ಇಂದು ಭ್ರಷ್ಟಾಚಾರ ನಿಗ್ರಹ ದಳವು ಶ್ರೀ.ಶಿವಕುಮಾರ ಹೆಚ್, ಅಧೀಕ್ಷಕ ಅಭಿಯಂತರರು, ಹೇಮಾವತಿ ನಾಲಾ ವಲಯ, ತುರುವೆಕೆರೆ & ಪ್ರಭಾರ ಮುಖ್ಯ ಅಭಿಯಂತರರು, ಹೇಮಾವತಿ ನಾಲಾ ವಲಯ, ತುಮಕೂರು ಎಂಬುವವರು ತಮ್ಮ ಬಲ್ಲ ಮೂಲಗಳಿಂದ ಅಸಮತೋಲನ ಆಸ್ತಿ ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿಗಳಿಕೆ ಪ್ರಕರಣವನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ ಅವರ ಕುಟುಂಬದವರು ವಾಸವಿರುವ ಮನೆಯಾದ ಜಯನಗರ ಪೂರ್ವ, ತುಮಕೂರು ಹಾಗೂ ಇವರ ತಂದೆ ವಾಸವಿರುವ ಎಸ್‌ಐಟಿ ಎಕ್ಸ್ಟೆನ್ಷನ್, ತುಮಕೂರಿನ ಮನೆಗಳ ಮೇಲೆ ದಾಳಿ ನಡೆಸಲಾಗಿರುತ್ತದೆ.

ಎಸಿಬಿ ತುಮಕೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಎಸಿಬಿ ಕೇಂದ್ರ ವಲಯದ ವಿವಿಧ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ದ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ–ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 788/898**

# <u>ಡಾ: ಸುಮತೀಂದ್ರ ನಾಡಿಗ ಅವರ ನಿಧನಕ್ಕೆ ಸಚಿವ ಕೃಷ್ಣಬೈರೇಗೌಡ ತೀವ್ರ ಶೋಕ</u>

**<u>ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)</u> :**

ಕನ್ನಡದ ಹಿರಿಯ ಸಾಹಿತಿ ಡಾ: ಸುಮತೀಂದ್ರ ನಾಡಿಗ ಅವರ ನಿಧನಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣಬೈರೇಗೌಡ ರವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ನವ್ಯ ಸಾಹಿತ್ಯದ ಬರಹಗಾರರಲ್ಲಿ ಡಾ: ಸುಮತೀಂದ್ರ ನಾಡಿಗ ಅವರ ಹೆಸರು ಬಹಳ ಮಹತ್ವದ್ದು. ಕಾವ್ಯ, ವಿಮರ್ಶೆ, ಅನುವಾದ ಹಾಗೂ ಶಿಶು ಸಾಹಿತ್ಯ ಪ್ರಾಕಾರಗಳಲ್ಲಿ ಗಮನಾರ್ಹವಾದ ಸಾಹಿತ್ಯ

ಕೃತಿಗಳನ್ನು ರಚನೆ ಮಾಡಿದ್ದ ಡಾ: ಸುಮತೀಂದ್ರ ನಾಡಿಗ ಅವರು ಪ್ರಾಧ್ಯಾಪಕರಾಗಿಯೂ ಕೂಡ ದೊಡ್ಡ ಶಿಷ್ಯ ಸಂಪತ್ತನ್ನು ಹೊಂದಿದ್ದರು. ಅವರ "ದಾಂಪತ್ಯ ಗೀತ" ಕೃತಿ ಹಿಂದಿ, ಇಂಗ್ಲಿಷ್ ಸೇರಿದಂತೆ ಅನೇಕ ಭಾರತೀಯ ಭಾಷೆಗಳಲ್ಲಿ ಅನುವಾದಗೊಂಡು ಜನಪ್ರಿಯವಾಗಿತ್ತು. ಜಡ & ಚೇತನ, ಪಂಚಭೂತಗಳು, ಸಮಗ್ರ ಕಾವ್ಯ & ಭಾವಲೋಕ ಮುಂತಾದ ಅವರ ಕವನ ಸಂಕಲನಗಳು ಅಪಾರ ಜನಪ್ರಿಯತೆ ಪಡೆದಿದ್ದವು. ಅವರ ವಿಮರ್ಶೆಯ ದಾರಿಯಲ್ಲಿ ಕೃತಿ ಕನ್ನಡ ಸಾಹಿತ್ಯದ ಪ್ರಮುಖ ವಿಮರ್ಶಾ ಕೃತಿಯಾಗಿದೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಮಹತ್ವದ ಪ್ರಶಸ್ತಿಗಳಿಗೆ ಭಾಜನರಾಗಿದ್ದ ಡಾ: ಸುಮತೀಂದ್ರ ನಾಡಿಗ ರವರ ನಿಧನದಿಂದ ಕನ್ನಡ ಸಾಹಿತ್ಯ ಲೋಕ ಮಹತ್ವದ ಲೇಖಕರನ್ನು ಕಳೆದುಕೊಂಡಂತಾಗಿದೆ. ಸಾಹಿತ್ಯಾಭಿಮಾನಿಗಳಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿ ನೀಡಲು ಪ್ರಾರ್ಥಿಸುತ್ತೇನೆ ಎಂದು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 789/899**

## ACB Raid

Bengaluru, July 7 (Karnataka Information)

Today ACB has conducted raids over the properties of Shri.Shivakumar H, Superintendent Engineer, Hemavathi Canal Zone, Turuvekere & I/C Chief Engineer, Hemavathi Canal Zone, Tumakuru District who is belived to have amassed disproportionate assets beyond his known sources of income.

Raids were conducted at Two places connected to this official 1) his place of residence at Jayanagar East, Tumakuru and 2) his Father's residence at SIT Extension, Tumakuru are being searched.

A Case against the official mentioned above is registered at Tumakuru ACB police station. Search and verification of properties by the ACB teams is continued to find out the source of income and other possible places for the search says official press release.

**ಸಂಖ್ಯೆ: 790/900**

# ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗದಲ್ಲಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಆರ್ಟ್ ಅಂಡ್ ಕ್ರಾಫ್ಟ್ ಶಿಕ್ಷಕರು– (7+3 ಹೈ.ಕ) ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ಆಗಸ್ಟ್ 2 ರಂದು ಆಯೋಗದ ಜಾಲತಾಣ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

**ಸಂಖ್ಯೆ: 791/901**

## Workshop on ‘Electromagnetism’

Bengaluru, August 7 (Karnataka Information)

A One-day workshop on ‘Electromagnetism’ for high school teachers of science will be conducted by J.N. Planetarium on Aug 9th, 2018. The programme aims at discussing the topic through activities that are useful for classroom teaching

Eligibility – Science Teachers of Classes VIII & X. Date – 9th August 2018, Venue – Jawaharlal Nehru Planetarium Sri. T. Chowdaiah Road, High Grounds, Bengaluru – 560 001. Time – 10.30 am to 3.30 pm Number of participants – 40.

Interested teachers must register over phone or by emailinfo@taralaya.org. A maximum of 40 teachers can be accommodated on a first-come-first-served basis.

Furter details may be obtained from Jawaharlal Nehru Planetarium on 2237 9725/2220 3234 Or visit our website: http://www.taralaya.org/announcements.php

******

**ಸಂಖ್ಯೆ: 792/902**

## Celebrating Birth Anniversary of Vainu Bappu

Bengaluru, August 7 (Karnataka Information)

Jawaharlal Nehru Planetariumis celebrating Vainu Bappu's birth anniversary on August 11th under the programme entitled "Celebration of the Month". the programme basically focuses on discussing the contributions of Vainu Bappu to the field of Astronomy.

Eligibility – Science Teachers and Enthusiasts Date – 11th August 2018, Venue – Jawaharlal Nehru Planetarium Sri. T. Chowdaiah Road, High Grounds, Bengaluru – 560 001. Time – 10.30 amd to 12.30 pm Number of participants – 40.

Interested teachers must register over phone or by emailinfo@taralaya.org. A maximum of 40 teachers can be accommodated on a first-come-first-served basis.

Furter details may be obtained from Jawaharlal Nehru Planetarium on 2237 9725/2220 3234 Or visit our website: http://www.taralaya.org/announcements.php

******

**ಸಂಖ್ಯೆ: 793/903**

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

**ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಸೇವಾ ಆಯೋಗವು ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿನ ಗ್ರಂಥಪಾಲಕರು 05 (ಹೈ.ಕ) ಹುದ್ದೆಗಳಿಗೆ ಆಗಸ್ಟ್ 3 ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದ್ದು, ಇಲಾಖಾ ವೆಬ್‌ಸೈಟ್ "http://kpsc.kar.nic.in" ನಲ್ಲಿ ವೀಕ್ಷಿಸಬಹುದಾಗಿದೆ. ಪ್ರಕಟಿಸಲಾದ 7 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.**

ಸಂಖ್ಯೆ: 794/904

# Provisional Selection List

Bengaluru, August 7 (Karnataka Information)

Karnataka Public Service Commission has published the Provisional Selection List on 03-08-2018, in the Commission Website http://kpsc.kr.nic.in for the Post of Librarian 05 (H.K.) in the Department of Pre-University Education. The Objections if any is to be filed with 7 days from the date of publication of the Provisional list.

ಸಂಖ್ಯೆ: 794/904

## ಅವಧಿ ವಿಸ್ತರಣೆ

ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)

ಎಸ್.ಜೆ. (ಸರ್ಕಾರಿ) ಪಾಲಿಟೆಕ್ನಿಕ್‌ನಲ್ಲಿ 2018–19 ನೇ ಸಾಲಿನ 2 ವರ್ಷಗಳ ಐ.ಟಿ.ಐ. ಪಾಸಾದ ಅರ್ಹ ಅಭ್ಯರ್ಥಿಗಳಿಗೆ 3ನೇ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿಗಳನ್ನು ಸಲ್ಲಿಸುವ ದಿನಾಂಕವನ್ನು ಆಗಸ್ಟ್ 10 ರವರಗೆ ವಿಸ್ತರಿಸಿರುವುದಾಗಿ ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಸಂಖ್ಯೆ: 795/905

## ಅವಧಿ ವಿಸ್ತರಣೆ

ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)

ಎಸ್.ಜೆ (ಸರ್ಕಾರಿ) ಪಾಲಿಟೆಕ್ನಿಕ್‌ನಲ್ಲಿ 2018–19 ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ "ಆಫ್‌ಲೈನ್ (**OFFLINE**) " ಮುಖಾಂತರ ಭರ್ತಿಯಾದ ಅರ್ಜಿಗಳನ್ನು ಸಲ್ಲಿಸಲು ಆಗಸ್ಟ್ 10 ರ ಸಂಜೆ 5.30 ಗಂಟೆಯವರೆಗೆ ವಿಸ್ತರಿಸಿರವುದಾಗಿ ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

****

ಸಂಖ್ಯೆ: 796/906

# <u>ಸಹಾಯಧನಕ್ಕಾಗಿ ಅರ್ಜಿ ಆಹ್ವಾನ</u>

ಬೆಂಗಳೂರು, ಆಗಸ್ಟ್ 7, (ಕರ್ನಾಟಕ ವಾರ್ತೆ)

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇಲ್ಲಿ ನೋಂದಾಯಿಸಿಕೊಂಡಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಉಪಯೋಗಕ್ಕಾಗಿ ಉಣ್ಣೆ ಮತ್ತು ಚರ್ಮ ಸಂಗ್ರಹಣಾ ಗೋದಾಮುಗಳನ್ನು ನಿರ್ಮಿಸಲು 2017–18 ಹಾಗೂ 2018–19 ನೇ ಸಾಲಿನ ಸಹಾಯಧನ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 10 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.